ಮಂಡಿಕೇರಿ ಗ್ರಾಮಾಂತರ ಠಾಣೆಯ ಅಪರಾಧ ಕ್ರಮಾಂಕ ೧೦ / ೭೯ವರ್ಷದ ಕೊಲೆಯ ಪ್ರಕರಣದಲ್ಲಿ ಬೆಂಬುಗ್ರಾವಂದ ರಾಮಯ್ಯ ಸ್ಥಳೀಯ ಪೊಲೀಸರಿಗೆ ಶರಣಾಗತನಾದನಂ ೧-೮-೮೬ರಲ್ಲಿ. ಈ ಅಪರಾಧಿಯನ್ನು ಈ ಪ್ರಕರಣದ ತನಿಖೆಯನ್ನು ನಡೆಸುತ್ತಿರುವ ಸಿ. ಓ. ಡಿ. ಅಧಿಕಾರಿಗಳಿಗೆ ಒಪ್ಪಿಸಲಾಯಿತು. ಈಗ ನ್ಯಾಯಾಂಗ ಬಂಧನದಲ್ಲಿದ್ದಾನೆ. ಈಗ ಮಡಿಕೇರಿಯಲ್ಲಿ ಸಿ. ಓ. ಡಿ. ಅಧಿಕಾರಿಗಳು ಈ ಕೊಲೆಯ ಬಗ್ಗೆ ತನಿಖೆಯನ್ನು ಮುಂದುವರಿಸಿದ್ದಾರೆ, ಈ ಕೊಲೆಗೆ ಸಂಬಂಧಪಟ್ಟಂತೆ ಇನ್ನಿತರ ವ್ಯಕ್ತಿಗಳ ಬಗ್ಗೆ ತನಿಖೆ ನಡೆದಿದೆ. ಹೆಚ್ಚಿನ ಮಾಹಿತಿ ಇದರ ಬಗ್ಗೆ ಈಗಿನ ಸಂದರ್ಭದಲ್ಲಿ ಕೊಡಲಂ ಕೊಲೆಯ ಪ್ರಕರಣಕ್ಕೆ ಧಕ್ಕೆಯಾಗಲಿದೆ.

೧೭. ಸಂಡೂರಂ ತಾಲ್ಲೂಕಿನ ಮುಂರಾಡಿಪುರದ ಬಳಿ ಲಾರಿಗಳಂ ಢಿಕ್ಕಿಯಾಗಿ ೧೪ ಜನರಂ ಸತ್ತಿರುವುದಂ.

ಶ್ರೀ ಯುಂ. ಭೂಪತಿ(ಸಂಡೂರು);— ಮಾನ್ಯ ಅಧ್ಯಕ್ಷರೇ ಸಂಡೂರು ತಾಲ್ಲೂಕಿನ ಮುಂರಾಡಿಪುರ ಕ್ರಾಸ್ ಬಳಿ ಎರಡು ಲಾರಿಗಳು ಡಿಕ್ಕಿಯಾಗಿ ಸುಮಾರು ೧೪ಜನರು ಮೃತರಾಗಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಪ್ರತ್ಯಕ್ಷದರ್ಶಿಯೊಬ್ಬರ ಪ್ರಕಾರ ೧೫ಕ್ಕೂ ಹೆಚ್ಚು ಮೃತರಾಗಿದ್ದಾರೆಂದಂ ತಿಳಿಸಿರುತ್ತಾರೆ. ಶ್ರಾವಣ ಮಾಸದ ಮೂರನೇ ಸೋಮವಾರದಂದು ಹೆಚ್ಚಿನ ಸಂಖ್ಯೆಯಲ್ಲಿ ಅವರು ಪ್ರಯಾಣಿಸುವಾಗ ರಾಜ್ಯ ಸಾರಿಗೆ ಸಂಸ್ಥೆಯ ಸಾರಿಗೆ ಸೌಕರ್ಯವಿಲ್ಲದಿರುವುದರಿಂದ ಲಾರಿಯಲ್ಲಿ ಅನಿವಾರ್ಯವಾಗಿ ಪ್ರಯಾಣ ಮಾಡಿದ್ದಾರೆ. ೩೦ಕ್ಕೂ ಹೆಚ್ಚು ಜನರಿಗೆ ಹೆಚ್ಚಿನ ಗಾಯಗಳಾಗಿದೆಯೆಂದಂ ತಿಳಿದು ಬಂದಿದೆ. ಆದಕ್ಕಾಗಿ ತಕ್ಷಣ ಸರಕಾರ ಸಾವುನೋವುಗಳನ್ನು ಅನುಭವಿಸಿರುವ ಕುಟುಂಬಗಳಿಗೆ ಪರಿಹಾರ ಒದಗಿಸಬೇಕಾಗಿ ವಿನಂತಿ.

ಶ್ರೀ ವೀರಣ್ಣ (ಮಾನ್ಯ ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೇ ನಾಳೆ ದಿವಸ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಯುಂ. ಭೂಪತಿ.—ಸ್ವಾಮಿ ಆಕ್ಸಿಡೆಂಟ್‌ನಲ್ಲಿ ಜನ ಸತ್ತಿದ್ದಾರೆ. ಆ ಜನತೆಯ ಬಗ್ಗೆ ಸ್ವಲ್ಪವಾದರೂ ಸರ್ಕಾರಕ್ಕೆ ಅನುಕಂಪ ಬೇಡವೇ ? ಅವರ ಬಗ್ಗೆ ಸ್ವಲ್ಪ ಅನುಕಂಪದ ಮಾತುಗಳಾದರೂ ಮಾನ್ಯ ಮಂತ್ರಿಗಳು ಹೇಳಬಾರದೆ ? ಇದರಲ್ಲಿ ಉತ್ತರ ತರಿಸಿ ಕೊಡುವ ಪ್ರಮೇಯಂ ವಾದರೂ ಏನಿದೆ. ಇಲ್ಲಿಯೇ ಉತ್ತರ ಹೇಳಬಹುದಲ್ಲವೇ ?

ಅಧ್ಯಕ್ಷರು.—ಉತ್ತರ ತರಿಸಿ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯುಂ. ಭೂಪತಿ.—ಅಧ್ಯಕ್ಷರೇ ಅನುಕಂಪದ ಮಾತುಗಳಾದರೂ ಬೇಡವೆ ?...

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯು ನಿಯಮ ೧೧೪ರ ಮೇರೆಗೆ ದಿನಾಂಕ ೨೫-೮-೮೬ರಂದು ಈ ಕೆಳಕಂಡ ವಿಧೇಯಂಕಗಳನ್ನು ಯಾವುದೇ ತಿದ್ದುಪಡಿಯಿಲ್ಲದ ವಿಧಾನ ಪರಿಷತ್ತು ಒಪ್ಪಿಕೊಂಡಿದೆ.

೧. ೧೯೮೬ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ (ತಿದ್ದುಪಡಿ) ವಿಧೇಯಂಕ.

೨. ೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಂಕ.

೩. ಬದಲಿ ಮೂತ್ರ ಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಂಕ ೧೯೮೬

೪. ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಂಕ ೧೯೮೬.

೫. ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಂಕ ೧೯೮೬.